ದಿಃ 28-3-2014 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಗಿದೆ.

ಮುಂದುವರೆದ ಪಾಟೀ ಸವಾಲು ಃ ಡಿಕಿದಾರರ ಪರವಾಗಿ ಶ್ರೀಬಿಹೆಚ್ ವಕೀಲರಿಂದಃ

5) ನಿಪಿಃ1ರಡಿಯಲ್ಲಿ 1 ಎಕರೆ 20 ಗುಂಟೆ ಜಮೀನನ್ನು ಸರ್ವೆ ನಂ.32ಃಬಿಯಲ್ಲಿ ಬೀರಪ್ಪ ಇತನಿಂದ ನನ್ನ ತಂದೆ, ಸೈಯದ್ ಅಮಾನುಲ್ಲಾ, ಸೈಯದ್‌ಸುಭಾನ್‌ಸಾಬ್ ಹಾಗೂ ಸೈಯದ್‌ಸಾಬಜಾನ್‌ಸಾಬ್ ಇವರು 18,900-00 ರೂ. ಗಳಿಗೆ ಖರೀದಿಸಿದ್ದಾರೆ. ಬೀರಪ್ಪ ಇತನಿಗೆ ನಿಪಿಃ1ರಲ್ಲಿರುವ ಜಮೀನು ಪಾಲುವಿಭಾಗದ ಮೂಲಕ ಬಂದಿತ್ತು. ನಿಪಿಃ1ರಲ್ಲಿ ಕಾಣಿಸಿದಂತಹ ವಿಭಾಗಪತ್ರದ ಉಲ್ಲೇಖ ಸರಿ ಇದೆ. ಬೀರಪ್ಪ ಇತನಿಗೆ ಎಷ್ಟು ಜನ ಮಕ್ಕಳು ಇದ್ದರೆಂಬುದು ನನಗೆ ಗೊತ್ತಿಲ್ಲ. ನಿಪಿಃ1ನ್ನು ಬೀರಪ್ಪ ಇತನ ಮಕ್ಕಳು ಬರೆದುಕೊಟ್ಟಿದ್ದಾರೋ ಅಥವಾ ಇಲ್ಲವೋ ಎಂಬುದು ನೆನಪಿಲ್ಲ. ಡಿಕ್ರಿದಾರರಾದ ಹಾಲಮ್ಮ ಇವಳ ಗಂಡನಾದ ಹನುಮಂತಪ್ಪ ಇತ ನಿಪಿಃ1ರಲ್ಲಿ ಮಾರಾಟಗಾರನು ಎಂದು ತೋರಿಸಿದ ಬೀರಪ್ಪನ ಒಬ್ಬ ಮಗನಿದ್ದಾನೆಂದರೆ ನನಗೆ ಗೊತ್ತಿಲ್ಲ. ನಿಪಿಃ1ರ ಮೂಲ ದಾಖಲೆ ಯಾರ ಹತ್ತಿರ ಇದೆಂಬುದು ನನಗೆ ಗೊತ್ತಿಲ್ಲ. ನಿಪಿಃ1ರಡಿಯಲ್ಲಿ ಬೀರಪ್ಪ ಅದರಲ್ಲಿ ಾಕಣಿಸಿದಂತಹ ಆಸ್ತಿಯನ್ನು ಮಾರಾಟ ಮಾಡಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿಃ1ರಲ್ಲಿ ಕಾಣಿಸಿದ ಉಲ್ಲೇಖದಲ್ಲಿಯ ವಿಭಾಗಪತ್ರವನ್ನು ನೋಡಿಲ್ಲ ಮತ್ತು ಆ ಪತ್ರದ ಮೂಲಕ ಬೀರಪ್ಪ ಇತನಿಗೆ ಎಷ್ಟು ಜಮೀನು ಬಂದಿತ್ತು ಎಂಬುದನ್ನು ತಿಳಿದುಕೊಂಡಿಲ್ಲ.

6) ನಿಪಿಃ1ರಲ್ಲಿ ಖರೀದಿಸಿದಂತಹ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆಃ ಖಾಲಿ ಜಾಗ ಇದ್ದು ಅದು ಯಾರದು ಎಂಬುದು ಗೊತ್ತಿಲ್ಲ, ಪಶ್ಚಿಮಕ್ಕೆ ಕಿರ್ಲೋಸ್ಕರ ಎಜುಕೇಷನ್ ಟ್ರಸ್ಟ್ ಶಾಲಾಕಟ್ಟಡ, ಉತ್ತರಕ್ಕೆಃಸುಭಾಷ್ ಲೇಔಟ್ ಮತ್ತು ಖಾಸಗಿ ಜಾಗೆಗಳು ಹಾಗೂ ದಕ್ಷಿಣಕ್ಕೆ 25 ಅಡಿ ಅಗಲದ ರಸ್ತೆಯನ್ನು ಕಾಣಿಸಲಾಗಿದೆ. ಈ ಚೆಕ್ಕಬಂದಿಗಳು ನನಗೆ ನನ್ನ ತಂದೆ ಹೇಳಿದ್ದರಿಂದ ಗೊತ್ತಾಗಿದೆ. ಈ ಚೆಕ್ಕಬಂದಿಗಳನ್ನು ನಿಪಿಃ1ರಲ್ಲಿ ಕಾಣಿಸಲಾಗಿದೆಯೋ ಅಥವಾ ಇಲ್ಲವೋ ಎಂಬುದನ್ನು ನಾನು ನೋಡಿಲ್ಲ ಮತ್ತೇ ಮುಂದುವರೆದು ಗಮನಿಸಿಲ್ಲ ಎಂದು ಹೇಳುತ್ತಾರೆ. ನಿಪಿಃ1ನ್ನು ಓದಲು ಆಗುವುದಿಲ್ಲ. (ಸಾಕ್ಷಿಗೆ ಆ ದಾಖಲೆಯನ್ನು ಓದಲು ಬರುವಂತೆ ಇರುವಂತಹ ಬೇರೊಂದು ದಾಖಲೆಯನ್ನು ಹಾಜರುಪಡಿಸುವಂತೆ ನಿರ್ದೇಶನ ನೀಡಲಾಯಿತು.) ನಿಪಿಃ1ರಲ್ಲಿರುವ ಇರುವಂತಹ ಚೆಕ್ಕುಬಂದಿಯನ್ನು

ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ನನಗೆ ಓದಲು ಆಗುವುದಿಲ್ಲವೆಂದು ಹೇಳುತ್ತಾರೆ. ನನಗೆ ನಿಪಿಃ1ರಲ್ಲಿರುವ ಚೆಕ್ಕಬಂದಿಗಳು ಗೊತ್ತಿದ್ದರೂ ಸಹ ಓದಲು ಬರುತ್ತಿಲ್ಲವೆಂದು ನನ್ನ ಕೇಸಿಗೆ ಅನಾನುಕೂಲವಾಗುತ್ತದೆಂದು ತಿಳಿದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿಃ1ರಲ್ಲಿರುವ ಜಮೀನನ್ನು ಮಾರಾಟ ಮಾಡಲು ಬೀರಪ್ಪ ಇತನಿಗೆ ಹಕ್ಕು ಮತ್ತು ಅವಶ್ಯಕತೆ ಇರಲಿಲ್ಲ ಅಂದರೆ ಸರಿಯಲ್ಲ. ಬೀರಪ್ಪ ಇತನಿಗೆ 1) ಕೆಂಚಪ್ಪ 2) ಬಸವರಾಜಪ್ಪ ಮತ್ತು 3) ಹನುಮಂತಪ್ಪ ಮಕ್ಕಳಿದ್ದರು ಅಂದರೆ ನನಗೆ ಗೊತ್ತಿಲ್ಲ. ನಿಪಿಃ1ರಲ್ಲಿ ಖರೀದಿದಾರರು ಎಂದು ತೋರಿಸಿದವರು ಆ ಪತ್ರವನ್ನು ಸೃಷ್ಟಿ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ.

7) ನಿಪಿಃ1ರಲ್ಲಿ ಕಾಣಿಸಿದ ಜಮೀನಿನ ಲೇ ಔಟ್ ಪ್ಲಾನ್ ಹಾಜರುಪಡಿಸಿಲ್ಲ. ಆ ಪ್ಲಾನ್ ನನ್ನ ಹತ್ತಿರ ಇದೆ ಅಂದರೆ ಸಾಕ್ಷಿ ಜೆರಾಕ್ಸ್ ಪ್ರತಿ ಇದೆ ಎಂದು ಹೇಳುತ್ತಾರೆ. ಆ ಪ್ರತಿಯನ್ನು ಹಾಜರುಪಡಿಸಿಲ್ಲ. ನಿಪಿಃ1ರಲ್ಲಿ ಕಾಣಿಸಿದ ಜಮೀನದಲ್ಲಿ ನನ್ನ ತಂದೆ ನನಗೆ ಮಾರಾಟ ಮಾಡಿದ ಸೈಟು ಬರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಅಲಿನೇಷನ್ ಮಾಡಿಸಿಕೊಂಡಂತಹ ಹಾಗೂ ಲೇ ಔಟ್ ಮಾಡಿಸಿಕೊಂಡಂತಹ ಜಮೀನಿನಲ್ಲಿ ನಾನು ಕ್ಲೇಮ್ ಮಾಡುತ್ತಿರುವಂತಹ ಸೈಟು ಇರುವುದಿಲ್ಲ ಅಂದರೆ ಸರಿಯಲ್ಲ. ನಿಪಿಃ5ರಲ್ಲಿರುವ ಆಸ್ತಿಯನ್ನು ನನಗೆ ಮಾರಾಟ ಮಾಡಲು ನನ್ನ ತಂದೆಗೆ ಅಧಿಕಾರ ಇರಲಿಲ್ಲ ಅಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿನಲ್ಲಿ ಸೈಯದ್ ಅಮಾನುಲ್ಲಾ, ಸೈಯದ್‌ಸುಭಾನ್‌ಸಾಬ್ ಹಾಗೂ ಸೈಯದ್‌ಸಾಬಜಾನ್‌ಸಾಬ್ ಇವರು ಮುಖ್ತ್ಯಾರ್‌ನಾಮೆಯನ್ನು ಬರೆದುಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿಃ5ರಲ್ಲಿ ಮತ್ತು ನನ್ನ ಅರ್ಜಿಯಲ್ಲಿ ಕಾಣಿಸಿದಂತಹ ಶೆಡ್ಯೂಲ್ ಆಸ್ತಿಗಳಿಗೆ ನಾನು ಮಾಲೀಕನಿದ್ದೇನೆ ಹಾಗೂ ಅವುಗಳ ಸ್ವಾಧೀನತೆಯನ್ನು ಹೊಂದಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

8)ನಿಪಿಃ 7 ರಿಂದ 10 ರಲ್ಲಿ ಕಾಣುತ್ತಿರುವ ಆಸ್ತಿಗಳು ಅಮಲ್ಜಾರಿ ಅರ್ಜಿಯ ಐಟಂ ನಂ.2ರಲ್ಲಿ ಅಡಕವಾಗುವುದಿಲ್ಲ ಅಂದರೆ ಸರಿಯಲ್ಲ. ಮಧ್ಯಂತರ ಅರ್ಜಿ ನಂ.5ರಲ್ಲಿ ಕಾಣಿಸಿದಂತಹ ಆಸ್ತಿಗಳು ಅಮಲ್ಜಾರಿ ಅರ್ಜಿಯ ಐಟಂ ನಂ.2ರಲ್ಲಿ ಕಾಣಿಸಿದಂತಹ ಜಮೀನದಲ್ಲಿ ಬರುತ್ತದೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಮಲ್ಜಾರಿ ಅರ್ಜಿ ಐಟಂ ನಂ.2ರ ಜಮೀನಿನ ಚೆಕ್ಕುಬಂದಿಗಳು

ನನಗೆ ಗೊತ್ತಿಲ್ಲ. ಆ ಆಸ್ತಿ ಈಗಲೂ ಕಂದಾಯ ಭೂಮಿಯಾಗಿದೆಂದರೆ ಸರಿಯಲ್ಲ. ಆ ಆಸ್ತಿಯ ಸ್ವಾಧೀನತೆಯನ್ನು ಡಿಕ್ರಿದಾರಳು ನ್ಯಾಯಾಲಯದ ಮೂಲಕ ಪಡೆದುಕೊಂಡಿದ್ದಾಳೆಂದರೆ ಸರಿಯಲ್ಲ. ಅಂತಹ ಸ್ವಾಧೀನತೆಯನ್ನು ಸರ್ವೆ ಅಧಿಕಾರಿಗಳು ಜಮೀನು ಅಳತೆ ಮಾಡಿ ನೀಡಿದ್ದಾರೆಂದರೆ ಸರಿಯಲ್ಲ. ಆ ಕುರಿತು ನಕ್ಷೆಯನ್ನು ಸಹ ಸರ್ವೆ ಅಧಿಕಾರಿಗಳು ನ್ಯಾಯಾಲಯಕ್ಕೆ ನೀಡಿದ್ದಾರೆಂದರೆ ಸರಿಯಲ್ಲ. ಆ ವಿಷಯ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ಎಲ್ಲ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಡಿಕ್ರಿದಾರಳಿಗೆ ತೊಂದರೆ ಕೊಡಲು ನಾನು ಸುಳ್ಳು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಅಮಲ್ಜಾರಿ ಅರ್ಜಿ ಐಟಂ ನಂ.2ರಲ್ಲಿ ಕಾಣಿಸಿದಂತಹ ಅಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಅಂದರೆ ಸರಿಯಲ್ಲ. ಆ ಜಮೀನದಲ್ಲಿ ಈಗ ಮನೆ ಕಟ್ಟಿಸುತ್ತಿದ್ದಾರೆಂದು ನಾನು ಹೇಳಿದ ಕಟ್ಟಡದಾರರು ಯಾರು, ಆ ಕಟ್ಟಡದ ವಿಸ್ತೀರ್ಣ ಮತ್ತು ಇತರ ವಿಷಯಗಳು ನನಗೆ ಗೊತ್ತಿಲ್ಲ. ಕಟ್ಟಡಗಳನ್ನು ಕಟ್ಟುತ್ತಿರುವ ಕುರಿತು ನಾನು ದಾಖಲೆ ಹಾಜರುಪಡಿಸಿಲ್ಲ. ಐಟಂ ನಂ.2ರಲ್ಲಿ ಯಾರೂ ಮನೆ ಕಟ್ಟಿಲ್ಲ ಮತ್ತು ಕಟ್ಟುತ್ತಿಲ್ಲ ಅಂದರೆ ಸರಿಯಲ್ಲ. ಆ ಜಮೀನದಲ್ಲಿ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೋ ಅಥವಾ ಇಲ್ಲವೋ ಎಂಬುದನ್ನು ಪರೀಕ್ಷಿಸಲು ನ್ಯಾಯಾಲಯದ ಆಯುಕ್ತರನ್ನು ನೇಮಿಸಲು ನನ್ನದ್ದು ಅಭ್ಯಂತರ ಇಲ್ಲ.

9) ನಿಪಿಃ1ರಲ್ಲಿರುವಂತಹ ಆಸ್ತಿ ಈಗ ಕಂದಾಯ ಜಮೀನು ಇರುವುದಿಲ್ಲ ಕಾರಣ ಕಂದಾಯ ದಾಖಲೆಗಳು ಇರುವುದಿಲ್ಲ. ಆ ಕುರಿತು ದಾಖಲೆ ಹಾಜರುಪಡಿಸಿಲ್ಲ. ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಡಿಕ್ರಿದಾರಳು ಐಟಂ ನಂ.2ರಲ್ಲಿಯ ಆಸ್ತಿಯಲ್ಲಿ ತನ್ನ ಸ್ವಾಧಿನಕ್ಕೆ ಪಡೆದುಕೊಂಡ ನಂತರ ಅದರ ಮಾಲೀಕಳಾಗಿದ್ದಾಳೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಉಳಿದ ತೀರ್ಪುಋಣಿದಾರರು ಹಾಗೂ 3ನೇ ಅರ್ಜಿದಾರರು ಗೈರು ಹಾಜರು ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

**(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)**

**ಓ ಹೇ ಕೇ ಸರಿ ಇದೆ,**

ಹಿರಿಯ ಸಿವಿಲ್ ಜಡ್ಜ್ ಮತ್ತು ಹೆಚ್ಚುವರಿ
ಎಂಎಸಿಟಿ, ಹರಿಹರ.